ಓ ಎಸ್ 57/2011
ಡಿ ಡಬ್ಲ್ಯೂ-1 ವಸಂತ ಪೂಜಾರಿ

**ದಿನಾಂಕ 05.10.2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

ಮುಂದುವರಿದ ಪಾಟೀ ಸವಾಲು ಃ ವಾದಿ ಪರ ಎ ಎಂ ವಕೀಲರಿಂದ

2. ನಮ್ಮ ಜಮೀನಿನಲ್ಲಿ ಎರಡು ಮನೆ ಇದೆ . ದಾವ ಸ್ವತ್ತಿನ ಸಮೀಪದಲ್ಲಿ ಎರಡನೇ ಪ್ರತಿವಾದಿಯ ಮನೆ ಇದೆ . ಅವರ ಮನೆಯಿಂದ ನನ್ನ ಮನೆ 35 ಫೀಟು ದೂರ ಇದೆ . ನಮ್ಮ ಮನೆಯ ಉತ್ತರಕ್ಕೆ ಮತ್ತು ಪೂರ್ವಕ್ಕೆ ಉಳಿಕೆ ಎಷ್ಟು ಜಮೀನು ಇದೆ ಎಂದು ಗೊತ್ತಿಲ್ಲ . ಆರ್ ಟಿ ಸಿ ಲೆಕ್ಕದಲ್ಲಿ ನಮ್ಮ ಜಮೀನಿನ ಒಟ್ಟು ವಿಸ್ತಿರ್ಣ 27 ಸೆಂಟ್ಸ್ . ನಮ್ಮ ಮನೆ ಎಷ್ಟು ವಿಸ್ತೀರ್ಣ ಇದೆ ಎಂದು ಗೊತ್ತಿಲ್ಲ . ನಮ್ಮ ಅಣ್ಣನ ಮನೆಯ ವಿಸ್ತಿರ್ಣ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ . ನಾನು ಮತ್ತು ನನ್ನ ಅಣ್ಣ ಪಂಚಾಯಿತ್ ನಿಂದ ಪರವಾನಿಗೆ ಪಡೆದು ಮನೆ ಕಟ್ಟಿದ್ದೇವೆ . ಸದರಿ ಪರವಾನಿಗೆ ಎಷ್ಟು ವಿಸ್ತೀರ್ಣಕ್ಕೆ ಎಂದು ಗೊತ್ತಿಲ್ಲ . ನಮ್ಮ ಮನೆಯ ದಕ್ಷಿಣ ಮತ್ತು ಪಶ್ಚಿಮಕ್ಕೆ ಎಷ್ಟು ಎತ್ತರದ ಧರೆ ಇದೆ ಎಂದು ಗೊತ್ತಿಲ್ಲ . ನಮ್ಮ ಅಣ್ಣನ ಮನೆಯ ದಕ್ಷಿಣ ಮತ್ತು ಪಶ್ಚಿಮಕ್ಕೆ ಎಷ್ಟು ಎತ್ತರದ ಧರೆ ಇದೆ ಎಂದು ಗೊತ್ತಿಲ್ಲ . ನಾವು ಯಾವ ಆಧಾರದಲ್ಲಿ ದಾವ ಸ್ವತ್ತಿನ ಮೇಲೆ ವಾದಿಗೆ ಹಕ್ಕಿಲ್ಲ ಎಂದು ಹೇಳಿದ್ದೇವೆ ಎಂದು ಗೊತ್ತಿಲ್ಲ . ದಾವ ಸ್ವತ್ತಿನಲ್ಲಿರುವ ಮನೆಯಲ್ಲಿ ವಾದಿ ವಾಸವಾಗಿದ್ದಾರೆ ಎಂದರೆ ಸರಿ . ಅವರ ಅಣ್ಣ ದಿ. ರಾಮ ಮೋಹನ ಮತ್ತು ಅವರ ಮಕ್ಕಳು ವಿಟ್ಲದಲ್ಲಿ ವಾಸವಾಗಿದ್ದಾರೆ . ನನ್ನ ಅಣ್ಣನ ಮನೆಯ ಪಶ್ಚಿಮದಲ್ಲಿ ಉತ್ತರ ದಕ್ಷಿಣಾಭಿಮುಖವಾಗಿ ಒಂದು ಅಗಳು ಇದೆ ಎಂದರೆ ಸರಿ . ಸದರಿ ಅಗಳು ಉತ್ತರದಲ್ಲಿ ತಗ್ಗಾಗಿದ್ದು ದಕ್ಷಿಣದಲ್ಲಿ ಎತ್ತರವಾಗಿದೆ ಎಂದರೆ ಸರಿ . ಸದರಿ ಅಗಳು ಎಷ್ಟು ಅಗಲ ಇದೆ ಎಂದು ಗೊತ್ತಿಲ್ಲ . ಸುಮಾರು 42 ವರ್ಷದಿಂದ ನಾನು ಹಳೆ ಮನೆಯಲ್ಲಿ ವಾಸವಾಗಿದ್ದೇನು . ಸದರಿ ಮನೆ ನನ್ನ ಮನೆ ಮತ್ತು ನನ್ನ ಅಣ್ಣನ ಮನೆಯ ನಡುವೆ

ಇತ್ತು . ನನ್ನ ಅಣ್ಣನ ಮನೆಯ ಹತ್ತಿರ ಇರುವ ಅಗಳಿನ ಬಾಬ್ತು ಮಾತ್ರ ನಮ್ಮ ಮತ್ತು ವಾದಿಯ ನಡುವೆ ವಿವಾದ ಇದೆ . ನನ್ನ ಅಣ್ಣನ ಮನೆಯ ದಕ್ಷಿಣಕ್ಕೆ ಮತ್ತು ಉತ್ತರಕ್ಕೆ ಇರುವ ಅಗಳಿನ ಬಾಬ್ತು ನಮ್ಮ ಮತ್ತು ವಾದಿಯ ನಡುವೆ ವಿವಾದ ಇಲ್ಲ ಎಂದರೆ ನನಗೆ ಗೊತ್ತಿಲ್ಲ . ನನ್ನ ಅಣ್ಣನ ಮನೆಯ ಪಶ್ಚಿಮಕ್ಕೆ ಇರುವ ಅಗಳಿನ ಬಾಬ್ತು ಮಾತ್ರ ನಮ್ಮ ಮತ್ತು ವಾದಿಯ ನಡುವೆ ವಿವಾದ ಇದೆ ಎಂದರೆ ಸರಿ . ನಾನು ಮುಖ್ಯ ವಿಚಾರಣೆಯಲ್ಲಿ ಪ್ರಾಕೃತಿಕ ವಿಕೋಪ ಎಂದರೆ ವಾದಿಯ ಮನೆಯಿಂದ ಬರುವ ನೀರು ಅಗಳಿನ ಮೇಲೆ ಬಿದ್ದು ಅಗಳು ಜರಿದಿರುತ್ತದೆ . ಸದರಿ ಸುಮಾರು 7 -8 ವರ್ಷಗಳಿಂದ ಬರುತ್ತದೆ . ಪ್ರಪಥಮವಾಗಿ 2010 ರಲ್ಲಿ ಅಗಳು ಜರಿದಿರುತ್ತದೆ . ಸದರಿ ವಿಷಯವನ್ನು ಪ್ರತಿವಾದ ಪತ್ರ ಸಲ್ಲಿಸುವಾಗ ನಮ್ಮ ವಕೀಲರಿಗೆ ಹೇಳಿರುತ್ತೇವೆ . ಪ್ರಾಕೃತಿಕ ವಿಕೋಪದಿಂದ ವಾದಿಗೆ ತೊಂದರೆ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಸದರಿ ವಿಚಾರವನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

3. ದಾವ ಸ್ವತ್ತಿನಿಂದ ನಮ್ಮ ಮನೆ ಎಷ್ಟು ತಗ್ಗಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ . ನಾನು, ನನ್ನ ತಂದೆ ಮತ್ತು ಅಣ್ಣಂದಿರು ಸೇರಿ ವಾದಿಯ ಅಗಳನ್ನು ಜರಿದಿದ್ದೇವೆ ಎಂದರೆ ಸರಿಯಲ್ಲ . ಸದರಿ ಜರಿದ ಭಾಗವನ್ನು ನಾವು ಕಟ್ಟಿ ಕೊಡಲು ಬದ್ಧರು ಎಂದರೆ ಸರಿಯಲ್ಲ . ನಮ್ಮ ಅಣ್ಣನಿಗೆ ಹೊಸ ಮನೆ ಕಟ್ಟುವಾಗ ಜಾಗ ಕಡಿಮೆ ಆಗಿದ್ದರಿಂದ ವಾದಿಯ ಅಗಳನ್ನು ಕಡಿದಿದ್ದೇವೆ ಎಂದರೆ ಸರಿಯಲ್ಲ . ಅಪಘಾತದ ಹಿನ್ನೆಲೆಯಲ್ಲಿ 2010 ರಲ್ಲಿ ವಾದಿ ಒಂದು ವರ್ಷ ಹಾಸಿಗೆ ಹಿಡಿದಿದ್ದು ಆ ಸಂದರ್ಭದಲ್ಲಿ ನಾವು ಈ ಕೃತ್ಯವನ್ನು ಮಾಡಿದ್ದೇವೆ ಎಂದರೆ ಸರಿಯಲ್ಲ . ಆದ್ದರಿಂದ ದಾವದಲ್ಲಿ ಕೇಳಿದ ಪರಿಹಾರವನ್ನು

ಪಡೆಯಲು ವಾದಿ ಅರ್ಹನು ಎಂದರೆ ಸರಿಯಲ್ಲ . ದಿನಾಂಕ **06-01-2011** ರಿಂದ ನಾವು ಅಗಳನ್ನು ಕಡಿಯಲು ಪ್ರಾರಂಭಿಸಿದೇವು ಎಂದರೆ ಸರಿಯಲ್ಲ . ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್‌ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಬಂಟ್ವಾಳ,